(ಇಂದು ದಿನಾಂಕಃ **13/06/2025** ರಂದು ಮ.ಕಾ.ಅ. ಸಂಖ್ಯೆಃ**16** ರಿಂದ **18** ರ ಮೇಲಿನ ಆದೇಶ ದಿನಾಂಕಃ**03/02/2025** ರಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆಃ 1 ಮತ್ತು 5 ನೇ ಎದುರುದಾರ ಪರಃ ಶ್ರೀ ಎಲ್.ಆರ್.ಡಿ. (ಎಸ್.ಎ.ಎಚ್.) ವಕೀಲರಿಂದಃ-**

ನಾನು ಕೊಟ್ಟ ನೋಟೀಸನ್ನು ನಿಆರ್-35, ಅಂಚೆ ರಸೀದಿಯನ್ನು ನಿಆರ್-35(ಎ), ಸ್ವೀಕೃತಿ ಪತ್ರವನ್ನು ನಿಆರ್-35(ಬಿ), ಇನ್ನೊಂದು ನೋಟೀಸನ್ನು ನಿಆರ್-36, ಅಂಚೆ ರಸೀದಿಯನ್ನು ನಿಆರ್-36(ಎ), ವಾಪಾಸು ಬಂದ ಅಂಚೆ ಕವರನ್ನು ನಿಆರ್-37 ಎಂದು ಗುರುತಿಸಲಾಯಿತು. (ಅಂಚೆ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು) ಅದರಲ್ಲಿಯ ನೋಟೀಸನ್ನು ನಿಆರ್-37(ಎ) ಎಂದು ಗುರುತಿಸಲಾಯಿತು. ಪ್ರೊಸಿಡಿಂಗ್ಸ ಪುಸ್ತಕವನ್ನು ನಿಆರ್-38, ಎರಡು ಪುಟಗಳನ್ನು ನಿಆರ್-38(ಎ ಮತ್ತು ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಮೇಲ್ಮನವಿದಾರರ ಪರಃ ಶ್ರೀ ಎಸ್.ಎಸ್.ಜೆ. ವಕೀಲರಿಂದಃ-**

ನಿಆರ್-35(ಬಿ) ಮೇಲೇ ಇರುವ ಸಹಿ ಮೇಲ್ಮನವಿದಾರನ ಸಹಿಯಲ್ಲ ಎನ್ನುವುದು ಗೊತ್ತಿಲ್ಲ. ಅದನ್ನು ಅಂಚೆ ಇಲಾಖೆಯವರು ಪಡೆದಿರುತ್ತಾರೆ. ನಿಆರ್-37 ದಿನಾಂಕಃ6/1/2012 ರಂದು ನನಗೆ ತಲುಪಿತು ಎನ್ನುವುದು ನಿಜ. ವಿಚಾರಣೆಯನ್ನು ದಿನಾಂಕಃ5/1/2012 ರಂದು ನಡೆಸಲಾಗಿದೆ ಎನ್ನುವುದು ನಿಜ. ಈ ಮುಂಚೆ ಮಾಡಲಾದ ಪಾಟೀ ಸವಾಲಿನ ನಂತರ ನಿಆರ್-38 ನ್ನು ಸೃಷ್ಟಿ ಮಾಡಿದ್ದೇನೆ ಎನ್ನುವುದು ಸುಳ್ಳು.

1 ಮತ್ತು 5 ನೇ ಎದುರುದಾರರ ವಕೀಲರ ಕಿರಿಯ ವಕೀಲನಾಗಿ ನಾನು ಕೆಲಸ ಮಾಡಿದ್ದರಿಂದ ಎದುರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ವಿಚಾರಣೆ ಮುಗಿದ ತಕ್ಷಣ ಎಲ್ಲಾ ದಾಖಲೆಗಳನ್ನು ಎದುರುದಾರ ಸಂಸ್ಥೆಗೆ ಕೊಟ್ಟಿದ್ದೇನೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.